ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
ಕೃಷಿ ಹವಾಮಾನ ವಿಭಾಗ
ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65
ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 21.06.2013

ಈ ವಾರದ ಮುನ್ಸೂಚನೆ (ದಿನಾಂಕ 22.06.13– 26.06.13 ವರೆಗೆ)

ನಿಯತಾಂಕಗಳು	22.06.13	23.06.13	24.06.13	25.06.13	26.06.13
ಮಳೆ (ಮಿ.ಮೀ)	6	1	6	5	5
ಗರಿಷ್ಠ ಉಷ್ಣಾಂಶ(ಡಿ.ಸೆ.)	31	30	30	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	21	21	21	20
ಮೋಡ (ಪ್ರಮಾಣ)	6	7	7	7	6
ಅರ್ದ್ರತೆ ೭.೨೦ ಬೆ (ಶೇ)	80	80	79	82	81
ಅರ್ದ್ರತೆ ೨.೨೦ ಮ (ಶೇ)	56	58	50	53	55
ಗಾಳಿಯ ವೇಗ (ಕಿ.ಮೀ/ಗಂಟೆಗೆ)	8	9	8	9	8
ಗಾಳಿಯ ದಿಕ್ಕು (ಡಿಗ್ರಿ)	260	260	270	260	240

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣದಿಂದ ಕೂಡಿದ್ದು, ಸಂಜೆಯ ಅಥವಾ ರಾತ್ರಿಯ ವೇಳೆ ತುಂತುರು ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 29.0-31.0°C ಮತ್ತು ಕನಿಷ್ಠ 20-21°C ಇರಲಿದೆ. ಬೆಳೆಗಿನ ಅರ್ದ್ರತೆ ಪ್ರಮಾಣ ಶೇ 79-82 % ಇದ್ದು ಮಧ್ಯಾಹ್ನ 50-58 % ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 8-9 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- **ಸಾಮಾನ್ಯ ಸೂಚನೆಗಳು:** ಬಿತ್ತನೆಗೆ ಮೊದಲು ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಹಾಗು ಭೂಮಿಯನ್ನು ಮಟ್ಟಮಾಡಿ ಬಿತ್ತನೆಗೆ ಹದಮಾಡಿಕೊಳ್ಳುವುದು.

ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವ್ಯದು.

ಕಾಲ ಕಾಲಕ್ಕೆ ಬೇವಿನ ಹಿಂಡ ಹಾಗೂ ಹೊಂಗೆ ಹಿಂಡಿಯನ್ನು ಭೂಮಿಗೆ ಸೇರಿಸುವುದರಿಂದ ಹಲವು ಬೆಳೆಗಳಿಗೆ ಮಾರಕವಾಗುವ ಜಂತು ಹುಳುಗಳ ಭಾದೆಯನ್ನು ತಡೆಗಟ್ಟಬಹುದು.

ಗುಲಾಬಿ:

ಕಪ್ಪು ಚುಕ್ಕೆ ರೋಗದ ನಿರ್ವಹಣೆ:

- ✓ ಮೇಲಿಂದ ಮೇಲೆ ನೀರು ಕೊಡುವುದನ್ನು ಕಡಿಮೆ ಮಾಡಿ.
- ✓ ರೋಗದಿಂದ ಪೀಡಿತವಾಗಿರುವ ಎಲೆಗಳನ್ನು ಆಯ್ದುಕೊಂಡು ನಾಶಪಡಿಸಬೇಕು.
- ✓ ರೋಗ ತೀವ್ರವಾಗಿದ್ದಲ್ಲಿ ಶಿಲೀಂಧ್ರನಾಶಕಗಳಾದ ಮ್ಯಾಂಕೊಜೆಬ್ ಅಥವಾ ಕ್ಲೋರೊತ್ಯಾಲೊನಿಲ್ ಅನ್ನು ಸಿಂಪಡಿಸಬೇಕು

ಹೂ ಕೊರೆಯುವ ಹುಳುಗಳನ್ನು ತಡೆಯಲು ಬಯೋಡೋಸ್ ಅನ್ನು 20 ml ಪ್ರತಿ 15 litre ನೀರಿಗೆ ಬೆರೆಸಿ ಸಿಂಪಡಿಸಿ. ಅಥವಾ ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ್ಲಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು.

ಸೋರೆ ಕಾಯಿ, ಹೀರೆ ಕಾಯಿ ಗಿಡಗಳಲ್ಲಿ ಬೂದಿ ರೋಗ: ಗಂಧಕ (ಸಲ್ಫರ್) ಅಥವಾ ಕೆಲ್ತೇನ್ ಅಥವಾ ಬೆನ್ಲೇಟ್ (0.1%) ಅನ್ನು ಸಿಂಪಡಿಸಿ.

ಹೇನು (ಏಫಿಡ್) ಹಾಗೂ ಎಲೆ ಜಿಗಿ ಹುಳುಗಳು ಎಲೆಯ ಕೆಳ ಭಾಗದಲ್ಲಿ ಇದ್ದು ರಸ ಹೀರುವುದರಿಂದ ಎಲೆಗಳು ಮುದುಡುತ್ತವೆ ಆದ್ದರಿಂದ ೪% ಬೇವಿನ ಕಷಾಯ ವನ್ನು ಸಿಂಪಡಿಸಿ ಅಥವಾ ರೋಗಾರ್ ಅಥವಾ ಇಮಿಡಾಕ್ಲೋಪ್ರಿಡ್ ಅಥವಾ ಲ್ಯಾನ್ಸರ್ ಗೋಲ್ಡ್ ಅನ್ನು ಸಿಂಪಡಿಸಿ ಅನ್ನು ಸಿಂಪಡಿಸಿ.

ಕೇದಿಗೆ ರೋಗ (ಡೌನಿ) ಕಂಡುಬಂದಲ್ಲಿ ರಿಡೋಮಿಲ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ಎಲೆ ಕೋಸು ಹಾಗೂ ಹೂ ಕೋಸು:

ಹೇನು (ಏಫಿಡ್): ಎಲೆಯ ಕೆಳ ಭಾಗದಲ್ಲಿ ಇರುತ್ತವೆ. ಎಲೆಗಳ ರಸ ಹೀರುವುದರಿಂದ ಎಲೆಗಳು ಮುದುಡುತ್ತವೆ ಹಾಗೂ ನಂತರ ಒಣಗುತ್ತವೆ. ಇವುಗಳನ್ನು ಹತೋಟಿ ಮಾಡಲು ೪% ಬೇವಿನ ಕಷಾಯವನ್ನು ಸಿಂಪಡಿಸಿ ಅಥವಾ ರೋಗಾರ್ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು ಸಿಂಪಡಿಸಿ.

ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್): ಎಲೆಗಳನ್ನು ಸಂಪೂರ್ಣವಾಗಿ ತಿಂದು ಹಾಕುತ್ತವೆ. ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ್ಲಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ನೋಡಲ್ ಅಧಿಕಾರಿ
ಡಾ॥ಎಮ್.ಬಿ. ರಾಜೇಗೌಡ
ಬೆಂಗಳೂರು.

This document was created using Smart PDF Creator
To remove this message purchase the product at www.SmartPDFCreator.com